## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SPL.C(Corruption) No. 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಕೆ.ಕೆ. ಹರೀಶ್** | **PW - 19** |
| ತಂದೆಯ ಹೆಸರು | : | **ಕೆ.ಎ.ಕಾರ್ಯಪ್ಪ** | **CW - 55** |
| ವಯಸ್ಸು | : | **55 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಮಡಿಕೇರಿ** | |

**ಸಾಕ್ಷಿಯನ್ನು ದಿನಾಂಕ 13-09-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

1. ನನ್ನ ತಾಯಿಯ ಹೆಸರು ಜಾನಕಿ ಗಂಡ ಕೆ ಎ ಕಾರ್ಯಪ್ಪ ಎಂದು ಇರುತ್ತದೆ. ನನ್ನ ತಾಯಿಯ ಹೆಸರಿನಲ್ಲಿ ಮಡಿಕೇರಿಯ ದೇಚೂರಿನಲ್ಲಿ ಒಂದು ಮನೆ ಇತ್ತು, ಸದರಿ ಮನೆ ಸರ್ವೆ ನಂಬರ್ 74/4 ರಲ್ಲಿ ಇತ್ತು, ಬ್ಲಾಕ್ ನಂಬರ್ 20 ನಲ್ಲಿ ಇತ್ತು. ಸದರಿ ಜಾಗ 8 ½ ಸೆಂಟ್ ಇದ್ದು, ಅದರಲ್ಲಿ ಹಂಚಿನ ಹಾಗೂ RCC ಮನೆಗಳು ಇದ್ದವು. ಸದರಿ ಮನೆಯನ್ನು ನಮ್ಮ ತಾಯಿ 2008 ರಲ್ಲಿ 11,00,000/- ರೂ ಗಳಿಗೆ ಶ್ರೀಮತಿ ಕೆ ಎ ಕಮಲ ರವರಿಗೆ ಮಾರಾಟ ಮಾಡಿರುತ್ತಾರೆ. ಮನೆಯ ಮಾರಾಟದ ಸಮಯದಲ್ಲಿ ಶ್ರೀಮತಿ ಕೆ ಎ ಕಮಲ ರವರ ಸಂಬಂಧಿಕರು ಮತ್ತು ಸೋದರ ಮನೋಹರ್ ಬಂದಿದ್ದರು. ಸದರಿ ಖರೀದಿ ಹಣವನ್ನು ನಮ್ಮ ತಾಯಿಗೆ ಚೆಕ್ ಮುಖಾಂತರ ಕೊಟ್ಟಿರುತ್ತಾರೆ. ಖರೀದಿ ಪತ್ರ ಮಡಿಕೇರಿ Sub registrar ಕಛೇರಿಯಲ್ಲಿ ನೊಂದಾಣಿ ಆಗಿರುತ್ತದೆ. ಸದರಿ ಖರೀದಿ ಪತ್ರದ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-**214** ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಪಿ.ಕೆ.ಎಸ್. ರವರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.